ಹಣವನ್ನು ಕೊಳ್ಳಿ ಹೊಡೆಯುತ್ತಿರುವವರನ್ನು ಹತೋಟಿಯಲ್ಲಿಡಲು ತಾವು ಏನು ಕ್ರಮ ತೆಗೆದು ತೆಗೆದುಕೊಂಡಿದ್ದೀರಿ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ಯಾವುದೇ ಖಾಸಗಿ ಸಂಸ್ಥೆಗಳು ಅನುದಾನವನ್ನು ಪಡೆಯಬೇಕಾದರೆ ವಿಧಿನಿಯಮಗಳನ್ನು ಅನುಸರಿಸಬೇಕಾಗುತ್ತದೆ, ಅನುದಾನ ಪಡೆಯಬೇಕಾದರೆ ಆ ಶಾಲೆಗೆ ಸೇರಿದಂತೆ ಆಟದ ಮೈದಾನ ಇರಬೇಕಾಗುತ್ತದೆ. ಲೈಬ್ರರಿ ಇರಬೇಕಾಗುತ್ತದೆ, ನುರಿತಂತಹ ಉಪಾಧ್ಯಾಯರುಗಳು ಇರಬೇಕಾಗುತ್ತದೆ. ರಿಜಿಸ್ಟರ್ಡ್ ಆದಂಥ ಸಂಸ್ಥೆಯಾಗಿರ ಬೇಕಾಗುತ್ತದೆ, ಹೀಗೆ ಕೆಲವಾರು ನಿಯಮಗಳನ್ನು ಹಾಕಲಾಗಿದೆ. ಈ ನಿಯಮಗಳನ್ನು ಸತತವಾಗಿ ೫ ವರ್ಷಗಳ ಕಾಲ ಅನುಸರಿಸಿಕೊಂಡು ಬಂದರೆ ಸರ್ಕಾರದಿಂದ ಅನುದಾನ ಪಡೆಯಲು ಸಾಧ್ಯವಿದೆ ಇದು ಒಂದು ವರ್ಗವಾದರೆ ಮತ್ತೊಂದು ವರ್ಗಕ್ಕೆ ಅಂದರೆ ಎಸ್. ಸಿ. ಅಂಡ್ ಎಸ್. ಟಿ. ಮೇನೇಜ್‌ಮೆಂಟ್‌ನವರು ನಡೆಸುವಂತಹ ಶಿಕ್ಷಣ ಸಂಸ್ಥೆಗಳಿಗೆ ವರ್ಷದ ಪ್ರಾರಂಭ ದಲ್ಲಿಯೇ ಅನುದಾನವನ್ನು ಕೊಡುತ್ತೇವೆ. ಈ ರೀತಿ ಮೊದಲನೆಯ ವರ್ಷವೇ ಅನುದಾನ ಕೊಡಲು ಅಲ್ಲಿ ಕಲಿಯಲು ಬರುವವರ ಪೈಕಿ ಶೇಕಡಾ ೫೦ರಷ್ಟು ಹರಿಜನ ಮತ್ತು ಗಿರಿಜನ ಮಕ್ಕಳು ಇರಬೇಕಾಗುತ್ತದೆ.

ಇನ್ನು ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಒಂದೇ ಜನಾಂಗದವರಿಗೆ ಮಾತ್ರ ಒಂದೇ ಗುಂಪಿನವರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಸರ್ಕಾರಕ್ಕೆ ಅಂತಹ ಕಂಪ್ಲೈಂಟ್ಸ್ ಬಂದಿಲ್ಲ ಒಂದುವೇಳೆ ಆ ರೀತಿ ಎಲ್ಲಿಯಾದರು ನಡೆಯುತ್ತಿದ್ದರೆ, ಅದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ನಾವು ಕ್ರಮ ಕೈಕೊಳ್ಳುತ್ತೇವೆ.

Sri M. H. Bekkinalakar— Even though specific instance is not there, it is a general complaint that after the coming in of the roster, these institutions are not following it. Will it be possible for the Hon'ble Minister for Education to get information and orrect if there are any defects ?

Smt. Nagamma C. Keshava Murthy.— To question (b), I have already replied "No". We have not received any complaints regarding non-following of the roster system in any intitution but as I said earlier, if the Hon'ble Member brings to my notice regarding non-following of the roster by any institution, I will difinitely get it examined and take suitable action.

Lifting of Sand from Talakadu

470 **Sri G. Raju Gowda** (Hanur).— Will the Minister for Forests, Mines and Geology be pleased to state.—

(a) the number of persons to whom licences have been given to transport sand from sand bank since, 1-1-1978 on lease basis in Talakadu, T. Narasipura Taluk, Mysore District,

(b) the terms and conditions incorporated in the Lease Deed ,

(c) whether any damage would be caused to the movable and immovable properties of the villagers of Talakad due to transportation of sand.

(d) by whom, the date on which and the reason for giving the temporary stay order, for the Lease Order of Government,

(e) whether the loss caused to the lessee, due to the temporary stay order, would be compensated by the Government ?

SRI G. MADE GOWDA (Minister for Forests, Mines and Geology)—

(a) The following three persons have been given premission to lift sand on lease basis by this Department with effect from 1-1-1978

Sri Abdul Basheer	...	Kollegal
Sri H. Ibrahim	...	Shimoga
Sri L. Boraiah	...	Tumkur

and Sri Abdul Basheer has been given a licence as per the terms of the Lease Deed.

(b) A copy of the Lease Deed pertaining to the terms of Lease Deed, is laid on the Table of the House.

(c) There is no likelihood of causing any damage if the sand control digging system is adopted.

(d) The istrict Magistrate, Mysore in his order dated 21-4-81 has issued the temporary stay order prohibiting lifting of sand from this area for a period of two months from 20-4-81, quoting the reasons as in the interest of the village and its people.

(e) The question of meeting the losses incurred by the lesses does not arise as there is no provision in the Mineral Concession Act.

ಶ್ರೀ ಕೆ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಪಾಮುಖ್ಯವಾದಂಥ ಪ್ರಶ್ನೆಯಾದ ಕಾರಣ ಮತ್ತು ಆ ಭಾಗದಲ್ಲಿ ಒಂದು ರೀತಿಯ ಸೆನ್‌ಷೇಸನ್ ಕ್ರಿಯೇಟ್ ಆಗಿರುವುದರಿಂದ ತಾವೇ ಈ ಪ್ರಶ್ನೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು. ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಕೆ. ಮಾದೇಗೌಡ.—ಇಲ್ಲಿ (೧) ಪ್ರಶ್ನೆಗೆ ಉತ್ತರವಾಗಿ ನಿಯಂತ್ರಿತ ಮರಳು ಆಗೆತ ಪದ್ಧತಿಯನ್ನು ಕೈಗೊಂಡಿದ್ದಾದರೆ ಯಾವ ವಿಧವಾದ ಹಾನಿಯೂ ಸಂಭವನೀಯವಲ್ಲ ಎಂದು ಹೇಳಿದ್ದೀರಿ. ತಾವೇ ನನ್ನೆ ದಿವಸ ಅಲ್ಲಿಗೆ ಬಂದು ಪರೀಕ್ಷೆ ಮಾಡಿದ್ದೀರಿ. ಅರಣ್ಯ ಇಲಾಖೆ ಅಧಿಕಾರಿಗಳು ಸಹ ಅಲ್ಲಿಗೆ ಬಂದಿದ್ದರು. ಅಲ್ಲಿಂದ ಮರಳನ್ನು ಸಾಗಿಸಿದರೆ ಎಷ್ಟೊಂದು ಅನಾಹುತವಾಗ್ತುದೆಂಬುದು ತಮಗೆ ಮನವರಿಕೆಯಾಗಿದೆ. ಇದರ ಜೊತೆಗೆ ಅಲ್ಲಿ ಬಹಳವಾದಂಥ ಸೆನ್‌ಷೇಸನ್ ಕ್ರಿಯೇಟು ಆಗಿರುವುದು ಸಹ ತಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನಿದೆ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಜಿ. ಮಾದೇಗೌಡ.—ಈ ಕಾವೇರಿ ನದಿಯ ತಲಕಾಡು ಪ್ರದೇಶದಲ್ಲಿ ಸುಮಾರು ೬೦೦ ಎಕರೆ ಜಮೀನಿನಲ್ಲಿ ಮರಳನ್ನು ತೆಗೆದು ಸಾಗಿಸಲು ಕೆಲವರಿಗೆ ಗುತ್ತಿಗೆ ಕೊಟ್ಟಿದ್ದಾರೆ. ಈ ರೀತಿ ಮರಳನ್ನು ಸಾಗಿಸಿದರೆ ನದಿಯಲ್ಲಿ ಪ್ರವಾಹ ಬಂದಾಗ ಊರಿಗೇ ಹಾನಿಯಾಗುತ್ತದೆಂದು ಅಲ್ಲಿನ ಜನರು ಪ್ರತಿಭಟನೆ ಮಾಡಿದ್ದು ಪತ್ರಿಕೆಗಳಲ್ಲಿ ಸಹ ಬಂದಿತ್ತು. ಮತ್ತು ಕಳೆದ ಸಲ ಇದು ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ನಾನು

ಸ್ಥಳವನ್ನು ಪರಿಶೀಲನೆ ಮಾಡಿ ಒಂದು ತೀರ್ಮಾನ ಕೈಕೊಳ್ಳುವುದಾಗಿ ಹೇಳಿದ್ದೆ. ಆದೇ ರೀತಿ ಸ್ಥಳದ ಭೇಟಿಗೆ ಹೋಗಿದ್ದಾಗ ಶ್ರೀ ಮಾದೇ ಗೌಡರು ಶ್ರೀರಾಜಗೌಡರು ಸಹ ಬಂದಿದ್ದರು. ನಾವೆಲ್ಲರೂ ಸ್ಥಳದ ಅಜಮಾಯಿಷಿ ಮಾಡಿ ಬಂದಿದ್ದೇವೆ. ಈಗ ನಮ್ಮ ಇಂಜಿನಿಯರ್‌ಗಳಿಗೆ ಫ್ಲಡ್ ಲೆವಲ್ ಸರ್ವೆ ಮಾಡಿ ವರದಿ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅವರ ವರದಿ ಬಂದಮೇಲೆ ಏನು ಕ್ರಮ ತೆಗೆದು ಕೊಳ್ಳಬೇಕೋ ಆದನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಮಾದೇಗೌಡ.—ಆರ್ಕಿಯಾಲಾಜಿಕಲ್ ಇಲಾಖೆಯವರು ಈ ಪ್ರದೇಶವನ್ನು ಏನ್‌ಷಿಯಂಟ್ ಮಾನ್ಯುಮೆಂಟ್ ಎಂದು ಟ್ರೀಟ್ ಮಾಡಿ ಈ ಪ್ರದೇಶದಿಂದ ಮರಳನ್ನು ಸಾಗಿಸಲು ಯಾರಿಗೂ ಗುತ್ತಿಗೆ ಕೊಡಬಾರದೆಂದು ಸರ್ಕಾರಕ್ಕೆ ಶಿಫಾರಸ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಮಾದೇಗೌಡ.—ಆರ್ಕಿಯಾಲಾಜಿಕಲ್ ಇಲಾಖೆಯವರು ಅಲ್ಲಿರುವಂತಹ ಪ್ರಾಚೀನ ವಾದಂಥ ವಸ್ತುಗಳನ್ನು ಉಳಿಸಿಕೊಂಡು ಹೋಗಬೇಕೆಂದು ಈಗಾಗಲೇ ಹಣ ಖರ್ಚು ಮಾಡುತ್ತಿದ್ದಾರೆ ಮತ್ತು ಕೆಲಸ ಮಾಡುತ್ತಿದ್ದಾರೆ. ಇಂತಹ ಪ್ರದೇಶದಲ್ಲಿ ಯಾವುದೇ ವಿಧವಾದಂಥ ಮೈನಿಂಗ್‌ನ್ನು ಲೀಸ್ ಮೇಲೆ ಕೊಡಬಾರದೆಂದು ಆದೇಶವಿದ್ದರೂ ಸಹ ಕೊಟ್ಟಿದ್ದಾರೆ ಇದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರ ಯೋಜನೆ ಮಾಡುತ್ತಿದೆ.

ಶ್ರೀ ಟಿ. ಬಿ. ಜಯಚಂದ್ರ. —ನಾನು ಈ ಸಂದರ್ಭದಲ್ಲಿ ಸೂಕ್ಷ್ಮ ಮಂತ್ರಿಗಳಲ್ಲಿ ನೇರವಾಗಿ ಪ್ರಶ್ನೆ ಕೇಳುವುದೇನೆಂದರೆ, ಈಗ ಆರ್ಕಾವತಿ ರಿವರ್ ಬೆಡ್‌ನಲ್ಲಿ ಒಂದು ದಿವಸಕ್ಕೆ ೩೧೦ ರಿಂದ ೪೦೦ ಟ್ರಕ್ ಲೋಡ್‌ನಷ್ಟು ಮರಳನ್ನು ತೆಗೆದು ಸಾಗಿಸುತ್ತಿದ್ದಾರೆ. ಈ ಏರಿಯಾವನ್ನು ಲೀಸ್ ಮೇಲೆ ಕೊಟ್ಟಿದ್ದರೂ ಸಹ ರಾಯಲ್ಟಿ ಕೊಡದೆ ಅನಧಿಕೃತವಾಗಿ ಮರಳನ್ನು ಸಾಗಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಇದರ ಬಗ್ಗೆ ನಿಮ್ಮ ಇಲಾಖೆಯವರು ಏನು ಕ್ರಮ ತೆಗೆದು ಕೊಂಡಿದ್ದಾರೆ ? ಪೋಲೀಸರ ನೆರವು ಪಡೆದು ಈ ರೀತಿ ಸಾಗಿಸುವುದನ್ನು ತಡೆಗಟ್ಟುತ್ತೀರಾ ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಆರ್ಕಾವತಿ ನದಿಯ ಮರಳು ಬೆಂಗಳೂರು ನಗರಕ್ಕೆ ಬರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದಕ್ಕೋಸ್ಕರವೇನೇ ಚೆಕ್‌ಪೋಸ್ಟ್‌ಗಳಲ್ಲಿ ನಮ್ಮ ಅಧಿಕಾರಿಗಳನ್ನು ಇಟ್ಟಿದ್ದೇವೆ. ಆದರೆ ಒಮ್ಮೊಮ್ಮೆ ಅವರು ಕಾನೂನು ಉಲ್ಲಂಘನೆ ಮಾಡಿರುವುದು, ಅವರ ಒಂದು ವರ್ತನೆ ಯಾವ ರೀತಿ ಮಾಡುತ್ತಾರೆ ಅನ್ನುವುದೂ ಸಹ ಗೊತ್ತಿದೆ. ಆದರಿಂದಲೇನೇ ನಾಶವು ನಮ್ಮ ಅಧಿಕಾರಿಗಳಿಗೆ ಪೋಲೀಸ್ ರಕ್ಷಣೆ ಕೊಡಬೇಕು ಎಂದು ಬರೆದಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎನ್ನುವುದನ್ನು ಈಗ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಮತ್ತೆ ಅದರ ತೀವ್ರ ಕ್ರಮ ತೆಗೆದುಕೊಂಡು ನಮ್ಮ ಅಧಿಕಾರಿಗಳಿಗೆ ಪೋಲೀಸ್ ರಕ್ಷಣೆ ಕೊಡುವ ಹಾಗೆ ಮಾಡಿ ಕಟ್ಟುನಿಟ್ಟಾಗಿ ಅಲ್ಲಿಂದ ಬರತಕ್ಕಂಥಾ ಮರಳನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಮಾದೇಗೌಡ.—ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅಪೇಕ್ಷಿದ್ದಾರೆ. ಅವರಿಗೆ ಕೊಟ್ಟಿರುವ ಲೀಸನ್ನು ಕ್ಯಾನ್ಸಲ್ ಮಾಡುತ್ತೇವೆ ಎಂದು ಹೇಳುವುದಾದರೆ ಗಲಾಟೆ ಆಗಬಹುದು. ಈಗಾಗಲೇ ಅದರ ಬಗ್ಗೆ ಗಲಾಟೆ ಯಾಗುವ ಹಾಗೆ ಒಂದು ಸೆನ್ಸೇಷನ್ ಕ್ರಿಯೇಟ್ ಆಗುವ ಹಾಗೆ ಇದೆ. ಜಿಲ್ಲಾಧಿಕಾರಿಗಳೂ ಸಹ ಅಲ್ಲಿಂದ ಯಾರೂ ಕೂಡ ಮರಳನ್ನು ಸಾಗಿಸಕೂಡದು ಎಂದು ತಾತ್ಕಾಲಿಕ ತಡೆ ಆಜ್ಞೆ ಕೊಟ್ಟಿದ್ದಾರೆ. ಆದರೂ ಸಹ ಆ ಪ್ರದೇಶದಲ್ಲಿ ರಿಳಳನೇ ಸೆಕ್ಷನ್ ಜಾರಿಗೆ ಬರುವ ಹಾಗೆ ಒಂದು ತರಹ ಗಲಾಟೆ ಯಾಗುತ್ತಾ ಇದೆ. ಆದುದರಿಂದ ಈಗ ತಾವೇನು ತಾತ್ಕಾಲಿಕವಾಗಿ ತಡೆ ಆಜ್ಞೆ ಕೊಟ್ಟಿದ್ದೀರೋ ಇದನ್ನು ಇನ್ನೂ ನೀವು ಇತ್ಯರ್ಥ ಮಾಡುವವರೆಗೆ ಮುಂದುವರೆಸಿಕೊಂಡು ಹೋಗುವ ಹಾಗೆ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಅವರಿಗೆ ನಾವು ಲೀಸ್‌ಗೆ ಕೊಟ್ಟಿದ್ದರೂ ಸಹ ಅವರು ಅಲ್ಲಿ ಮರಳನ್ನೂ ತೆಗೆಯುತ್ತಾ ಇಲ್ಲ. ನಮಗಿಂತಲೂ ಮುಂಚಿತವಾಗಿಯೇ ಆ ಊರಿನವರೇ ಅಲ್ಲಿ ಮರಳು ತೆಗೆಯದೇ ಇರುವ ಹಾಗೆ ಆ ಲಾರಿಯವನನ್ನು ಓಡಿಸಿದ್ದಾರೆ. ಆದುದರಿಂದ ಈಗ ಅವರು ಅಲ್ಲಿ ಮರಳನ್ನು ತೆಗೆಯುತ್ತಾ ಇಲ್ಲ. ಅವೆಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಒಂದು ಫ್ಲಡ್ ಲೆವಲ್ ಸರ್ವೆ ಮಾಡ

ಬೇಕು ಎಂದು ಇಂಜನೀಯರ್‌ಗೆ ಹೇಳಿದ್ದೇವೆ. ಅವರ ರಿಪೋರ್ಟ್ ಬಂದ ಮೇಲೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಪ್ರಶ್ನೆಯು (ಈ) ಗೆ ಉತ್ತರವಾಗಿ ಮೈಸೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರು ದಿನಾಂಕ ೨೧-೪-೧೯೮೧ರ ಆಜ್ಞೆ ಮೇರೆಗೆ ಸದರಿ ಗ್ರಾಮದ ಮತ್ತು ಗ್ರಾಮಸ್ಥರ ರಕ್ಷಣೆ ಕಾರಣ ಉಲ್ಲೇಖಿಸಿ ಈ ಪ್ರದೇಶದಿಂದ ಪುರಳು ತೆಗೆಯುವುದನ್ನು ದಿನಾಂಕ ೨೦-೪-೧೯೮೧ ರಿಂದ ಎರಡು ತಿಂಗಳ ಅವಧಿಯವರೆಗೆ ನಿಷೇಧಿಸಿ ತಾತ್ಕಾಲಿಕ ತಡೆ ಆಜ್ಞೆ ಜಾರಿ ಮಾಡಿದ್ದರು ಎಂದು ಹೇಳಿದ್ದೀರಿ. ಈಗ ಆ ತಡೆ ಆಜ್ಞೆಯ ಅವಧಿ ಮುಗಿದು ಹೋಗಿದೆ ಈಗ ತಡೆ ಆಜ್ಞೆ ಇಲ್ಲ. ಆದುದರಿಂದ ಇದನ್ನು ಗುತ್ತಿಗೆಗೆ ತೆಗದುಕೊಂಡವರು ಅಲ್ಲಿಯ ಮರಳನ್ನು ತೆಗೆಯುವುದಕ್ಕೆ ಅರ್ಹರಾಗಿದ್ದಾರೆ, ಸ್ವತಂತ್ರರಾಗಿದ್ದಾರೆ, ಈ ಕಾರಣದಿಂದ ಮಾನ್ಯ ಸದಸ್ಯರು ಅಲ್ಲಿ ಪುನಃ ಗಲಾಟೆಯಾಗಬಹುದೇನೋ ಅನ್ನುವ ಶಂಕೆ ವ್ಯಕ್ತಪಡಿಸಿ ಈ ತಡೆ ಆಜ್ಞೆಯನ್ನು ಮುಂದುವರೆಸುವ ಹಾಗೆ ಕೇಳಿದ್ದಾರೆ. ನಾನೂ ಸಹ ತಮ್ಮನ್ನು ಕೇಳುವುದು ಇಷ್ಟೆ. ಅಲ್ಲಿ ಶಾಂತಿಯನ್ನು ಕಾಪಾಡುವ ದೃಷ್ಟಿಯಿಂದ ನೀವು ಇದರ ಬಗ್ಗೆ ತೀರ್ಮಾನವನ್ನು ಕೈಕೊಳ್ಳುವವರೆಗೆ ಈ ತಡೆ ಆಜ್ಞೆಯನ್ನು ಮುಂದುವರೆಸುತ್ತೀರಾ ?

ಶ್ರೀ ಜಿ. ಮಾದೇಗೌಡ.—ನಾನು ಮೊದಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ, ಅವರು ಅಲ್ಲಿಂದ ಮರಳು ಎತ್ತುತ್ತಾನೆ ಇಲ್ಲ ಎಂದು. ತಮಗೆ ಹೇಳಬೇಕಾದರೆ ಆ ಲಾರಿಯವರೂ ಸಹ ನನ್ನ ಹತ್ತಿರ ಬಂದು ಈ ಬಗ್ಗೆ ತೀರ್ಮಾನ ಮಾಡಿಕೊಡಿ ಎಂದು ಬಂದಿದ್ದಾರೆ ಅಲ್ಲದೆ ಆ ಗ್ರಾಮಸ್ಥರೂ ಸಹ ನನ್ನ ಹತ್ತಿರ ಬಂದು ಇದನ್ನು ಆದಷ್ಟು ಬೇಗ ತೀರ್ಮಾನ ಮಾಡಿಕೊಡಿ ಎಂದು ಕೇಳಿದ್ದಾರೆ. ಇಬ್ಬರ ಕಡೆಯವರೂ ಹೇಳಿದ್ದಾರೆ. ನಾನೂ ಕೂಡ ಅವರಿಗೆ ಹೇಳಿದ್ದೇನೆ ಏನೆಂದರೆ ಆ ಜಾಗದಲ್ಲಿ ಕೊಟ್ಟಿರೆ ಆ ಊರಿನವರಿಗೆ ಕಷ್ಟವಾಗುತ್ತದೆ ಬೇರೆ ಕಡೆ ಎಲ್ಲಿ ಮರಳು ಇದೆ, ಅಲ್ಲಿ ತೆಗೆದುಕೊಳ್ಳಿ ಎಂದು. ಲೀಸ್‌ಗೆ ತೆಗೆದುಕೊಂಡಿರುವವರು ಮತ್ತು ಆ ಊರಿನವರನ್ನೂ ಸಹ ಕರೆಸಿ ಬೇಗನೇ ತೀರ್ಮಾನ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರ ಗಮನಿಸಿದೆ. ಆದುದರಿಂದ ಅಲ್ಲಿ ಗಲಾಟೆಯಾಗದೆ ಇದ್ದ ಹಾಗೆ ನೋಡಿಕೊಂಡು ತಕ್ಷಣ ಈ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

Accommodation for Primary Schools in Nanjangud Taluk

1100 SRI K.B. SHIVAIAH (Nanjangud)—Will the Minister of State for Primary and Secondary Education be pleased to state :—

(a) the number of Primary Schools in Nanjangud Taluk ;

(b) the number of Schools possessing own buildings ;

(c) the number of schools experiencing difficulties in conducting classes for not effecting major repairs ;

(d) the number of Schools where the post of teachers are fallen vacant in this Taluk and the period since when they are fallen vacant ;

(e) the period required by the Government to fill up these vacant posts ?